1



# ಸನ್ನಿವೇಶ ರಚನೆ

27

**ಸೂಚನೆ :**

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಸರ ಅರ ಅರಸ ಗರಗಸ

ಒಂದು ದಿನ ಅರಸನು ರಾಜ್ಯವೀಕ್ಷಣೆಗೆ ಕುದುರೆಯೇರಿ ಹೊರಟನು. ರಾಜ ಬೀದಿಯಲ್ಲಿ ಬಡಗಿಯ ಅಂಗಡಿ ಒಂದು ಇತ್ತು. ಬಡಗಿಯಾದ ಈರ ಗರಗಸದಿಂದ ಹಲಗೆಯೊಂದನ್ನು ಕತ್ತರಿಸುತ್ತಿದ್ದನು. ಅವನ ತಮ್ಮ ಬೀರ ಅಣ್ಣನ ಕೆಲಸದಲ್ಲಿ ನೆರವಾಗುತ್ತಿದ್ದ. ಅಣ್ಣ ಈರ ಮಾಡಿದ ಮೇಜಿಗೆ ಅರದಿಂದ ಕೊನೆಯ ಮೆರುಗು ಕೊಡುತ್ತಿದ್ದ. ಅಲ್ಲಿಗೆ ಬಂದ ಅರಸ ತನಗಾಗಿ ಈರ ಮಾಡಿದ ಸುಖಾಸನವನ್ನು ಕಂಡು ಖುಷಿ ಪಟ್ಟನು.

ಈ ರಾಜಬೀದಿಯಲ್ಲಿ ಅನೇಕ ಜನರು ವಸ್ತುಗಳನ್ನು ತೆಗೆದುಕೊಳ್ಳಲು ಬಂದು ಹೋಗುತ್ತಿದ್ದರು. ರಸ್ತೆ ತುಂಬ ಗಲಾಟೆಯಿಂದ ಕೂಡಿತ್ತು. ಸೀಮಳು ತರಕಾರಿ ಕೊಂಡಳು. ದಾರಿಯಲ್ಲಿ ಬರುವಾಗ ಬಣ್ಣ ಬಣ್ಣದ ಸರಗಳನ್ನು ನೋಡಿದಳು. ಒಂದು ಸರವನ್ನು ಕೊಂಡಳು.



2



# ಸನ್ನಿವೇಶ ರಚನೆ

46

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಜನ ಮರ ನಗ ಬಸವ

ನಮ್ಮೂರ <u>ಜನ</u> ಪ್ರತಿ ವರ್ಷ ವನಮಹೋತ್ಸವದ ಹಬ್ಬ ಆಚರಿಸುತ್ತಾರೆ. ಅಂದು ಊರಿನ ನಾಯಕರು ಬಂದು ಎಲ್ಲರಿಗೂ ಸಸಿಯನ್ನು ಕೊಡುತ್ತಾರೆ. ಜನರು ಸಸಿಯನ್ನು ನೆಡುತ್ತಾರೆ. ರಸ್ತೆಯ ಬದಿಯಲ್ಲಿ ಸಾಲು <u>ಮರ</u> ಬೆಳೆಯುತ್ತಾರೆ.

ವನಮಹೋತ್ಸವದಲ್ಲಿ <u>ಬಸವ</u>ನಿಗೆ ಬಾರೀ ಪೂಜೆ ಮಾಡುತ್ತಾರೆ. ಈ ಹಬ್ಬದಲ್ಲಿ ಜನರು ರೇಷ್ಮೆ ಉಡುಪನ್ನು ಮತ್ತು <u>ನಗ</u>ಗಳನ್ನು ಧರಿಸುತ್ತಾರೆ. ಬಸವನಿಗೆ ಪೂಜೆ ಮಾಡಿ ಸಿಹಿ ತಿಂಡಿ ನೀಡುತ್ತಾರೆ.



a



b

3



# ಸನ್ನಿವೇಶ ರಚನೆ

68

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಪಟ ಉಡ ಚಮಚ ಉದಯ

ಈಗ ಉದಯದ ಸಮಯ. ಶಾಮು ಅವನ ಮನೆ ಮುಂದೆ ಕುಳಿತು ತಿಂಡಿಯನ್ನು ಚಮಚದಲ್ಲಿ ತಿನ್ನುತ್ತಿದ್ದಾನೆ. ಮನೆಯ ಸಮೀಪದಲ್ಲಿ ರವಿಯ ಗೆಳೆಯರು ಪಟವನ್ನು ಹಾರಿಸುತ್ತಿದ್ದಾರೆ. ಶಾಮು ತಿನ್ನುವುದನ್ನು ಬಿಟ್ಟು ಪಟವನ್ನು ನೋಡುತ್ತಾ ಕುಳಿತು ಬಿಟ್ಟ. ಅವನ ತಾಯಿ ಅಲ್ಲಿಗೆ ಬಂದು ''ಶಾಮು ಮೊದಲು ತಿಂಡಿ ತಿನ್ನು ನಂತರ ನಿನ್ನ ಪಟ ತೆಗೆದುಕೊಂಡು ಆಡಲು ಹೋಗು.'' ಎಂದರು.

ಅಲ್ಲೇ ಇದ್ದ ಬಂಡೆಯ ಮೇಲೆ ಒಂದು ಉಡ ಇತ್ತು. ಇದನ್ನು ನೋಡಿದ ನಾಯಿ ಟಾಮಿ ಬೊಗಳುತ್ತಾ ಉಡದ ಕಡೆಗೆ ಓಡಿತು. ಆದರೆ ರವಿಯ ಗೆಳೆಯ ಸೀನು ಟಾಮಿ ತನ್ನ ಕಡೆ ಬರುತ್ತಿದೆ, ಎಂದುಕೊಂಡು ಹೆದರಿ ಅವನ ಮನೆಯ ಕಡೆ ಓಡಿದ.



a